## ಮಲಯಾಳಂ ಭಾಷೆಯ ವಿಶಿಷ್ಟ ಕವಿ ಅಕ್ಕಿತ್ತಂ ಅಚ್ಯುತನ್ ನಂಬೂದಿರಿ ಅವರು ಈ ಬಾರಿಯ ಜ್ಞಾನಪೀಠ ಪ್ರಶಸ್ತಿ ಪಡೆದಿದ್ದಾರೆ. ಗಾಂಧೀವಾದಿ ಲೇಖಕ ಅಚ್ಯುತನ್ ಬದುಕು–ಸಾಹಿತ್ಯ ಕುರಿತ ನುಡಿನೋಟ ಇಲ್ಲಿದೆ.

ಸುಮಾರು ವರ್ಷಗಳ ಹಿಂದಿನ ಕತೆಯಿದು. ಉಣ್ಣಿಕೃಷ್ಣನ್ ನಾಯರ್ ಮಾಸ್ತರ್ ಎಂಬ ಶಿಕ್ಷಕರೊಬ್ಬರು ಕವಿತೆ ಬರೆಯುತ್ತಿದ್ದ ವಕೀಲರ ಗುಮಾಸ್ತನಾಗಿದ್ದ ಇಡಶ್ಶೇರಿ ಗೋವಿಂದನ್ ನಾಯರ್ ಬಳಿ ಬಂದು, 'ಈ ಹುಡುಗ ಅಲ್ಪ ಸ್ವಲ್ಪ ಕವಿತೆ ಬರೆಯುತ್ತಿದ್ದಾನೆ. ಒಂಚೂರು ಗಮನಿಸಿ' ಎಂದಿದ್ದರು. ಅವರು ತಂದಿದ್ದ ಕವಿತೆಯನ್ನು ಓದಿದ ಇಡಶ್ಶೇರಿ, 'ಪರ್ವಾಗಿಲ್ಲ, ನಾನು ಗಮನಿಸುವೆ. ಇವನಿಗೆ ನಗುವುದಕ್ಕೆ ಗೊತ್ತಿದೆ' ಎಂದಿದ್ದರು.

ನಗು ಮತ್ತು ಅಳು ಗೊತ್ತಿರುವವನು ಮನುಷ್ಯನಾಗುತ್ತಾನೆ. ಹಾಗಿರುವ ಮನುಷ್ಯನಿಗೆ ಕವಿತೆ ಬರೆಯಲು ಸಾಧ್ಯ ಎಂಬ ನಂಬಿಕೆ ಇದ್ದವರಾಗಿದ್ದರು ಇಡಶ್ಶೇರಿ. ನಂತರ ಆ ಹುಡುಗನನ್ನುದ್ದೇಶಿಸಿ, 'ಕಾಲಿನಡಿಯಲ್ಲಿ ನಿಧಿಯಿದ್ದರೆ ಸಾಲದು ನಂಬೂದಿರಿ ಹುಡುಗಾ, ಅದನ್ನು ನೋಡುವ ಕಣ್ಣುಗಳೂ ಬೇಕು' ಎಂದು ಹೇಳಿ ಆ ಕವಿತೆಯನ್ನು ತಿದ್ದಿದರು. ಕಾಲ ಕಳೆದಂತೆ ಆ ನಂಬೂದಿರಿ ಹುಡುಗ ಕಾಲಿನಡಿಯಲ್ಲಿದ್ದ ನಿಧಿಯನ್ನು ಕಂಡುಕೊಂಡ. ಆ ಹುಡುಗನೇ 'ಅಕ್ಕಿತ್ತಂ' ಎಂಬ ಮನೆ ಹೆಸರಿನಿಂದ ಖ್ಯಾತರಾದ ಅಕ್ಕಿತ್ತಂ ಅಚ್ಯುತನ್ ನಂಬೂದಿರಿ.

ಮಲಪ್ಪುರಂ ಜಿಲ್ಲೆಯ ಪೊನ್ನಾನಿಯಲ್ಲಿರುವ ಇಡಶ್ಶೇರಿ ಅವರಿಗೆ ತನ್ನ ಕವಿತೆಗಳನ್ನು ತೋರಿಸಲು ಅಕ್ಕಿತ್ತಂ ಕುಮರನೆಲ್ಲೂರಿನಿಂದ ಆಗಾಗ ಬರುತ್ತಿದ್ದರು. ಖ್ಯಾತ ಕವಿ ಉರೂಬ್ (ಪಿ.ಸಿ. ಕುಟ್ಟಿಕೃಷ್ಣನ್) 'ಪೊನ್ನಾನಿ ಕಳರಿ' ಎಂದು ಕರೆದ ಅದೇ ಸಾಹಿತ್ಯ ವಲಯದಲ್ಲಿ ಅಕ್ಕಿತ್ತಂ ಕವಿತೆ ಬರೆಯಲು ಕಲಿತಿದ್ದು.

'ಇನ್ನೊಬ್ಬರಿಗಾಗಿ ನಾನು ಅಳುವಾಗ
ನನ್ನಾತ್ಮದಲ್ಲಿ ಬೆಳಕು ತುಂಬುತ್ತದೆ
ಇನ್ನೊಬ್ಬರಿಗಾಗಿ ನಾನು ಕಿರು ನಗುವಾಗ
ನನ್ನ ಹೃದಯ ಬೆಳದಿಂಗಳಂತೆ ಹೊಳೆಯುವುದು'

ಎಂದು ಅಕ್ಕಿತ್ತಂ ಬರೆದಿದ್ದು ಇಲ್ಲಿಯೇ. 'ವೆಳಿಚ್ಚಂ ದುಖ ಮಾಣುಣ್ಣಿ